## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1532/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ಶ್ರೀಮತಿ ರೇಖಾ ಗಂಡ ಸಿದ್ದಣ್ಣ ಕರನಕೋಟೆ
ವಃ 22 ವರ್ಷ, ಉಃ ಮನೆ ಕೆಲಸ

2 ಶಾರದಾಬಾಯಿ ಗಂಡ ಸೂರ್ಯಕಾಂತ ಹೆಬ್ಬಾಳ
ವಃ 60 ವರ್ಷ, ಉಃಮನೆ ಕೆಲಸ

3. ಸಿದ್ದು @ ಸಿದ್ದರಾಮ ತಂದೆ ಸೂರ್ಯಕಾಂತ ಹೆಬ್ಬಾಳ
ವಃ 21 ವರ್ಷ, ಉಃ ಕಾರ ಚಾಲಕ

4. ಶರಣಪ್ಪ ತಂದೆ ಸೂರ್ಯಕಾಂತ ಹೆಬ್ಬಾಳ
ವಃ 26 ವರ್ಷ, ಉಃ ಟೇಲರ ಕೆಲಸ
ಸಾಃ ಎಲ್ಲರೂ ಶಿವಾಜಿ ನಗರ ರಿಂಗರೋಡ ಕಲಬುರಗಿ

----

### ದೋಷಾರೋಪಣೆ

ನಾನು ಶ್ರೀ ಬಾಲು, ಬಿ.ಎ., ಎಲ್ಎಲ್ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 17-07-2022 ರಂದು ರಾತ್ರಿ 08.00 ಗಂಟೆಯ ಸುಮಾರಿಗೆ ಮಳಖೇಡ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಹಂಗನಳ್ಳಿ ಗ್ರಾಮದಲ್ಲಿ ಚಾಸಾ 1, 4 ನೇದ್ದವರು ಮನೆಯಲ್ಲಿ ಇದ್ದಾಗ ಆರೋಪಿತರೆಲ್ಲರೂ ಕೂಡಿ ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಆರೋಪಿ 1 ನೇದ್ದವಳು ನನ್ನ ಗಂಡನ ಆಸ್ತಿಯಲ್ಲಿ ಪಾಲು ಕೊಡುತ್ತಿಲ್ಲ, ಅಂತಾ ಕೇಳಿದ್ದು ಚಾಸಾ 1, 4 ನೇದ್ದವರು ಇನ್ನು ಮಕ್ಕಳ ಮದುವೆ ಆದ ಮೇಲೆ ಕೊಡುತ್ತೇವೆ ಅಂತಾ ಹೇಳಿದ್ದಕ್ಕೆ ಆರೋಪಿತರು ಅವಾಚ್ಯವಾಗಿ ಬೈದು ಆರೋಪಿ 1 ಮತ್ತು 2 ನೇದ್ದವರು ತೆಕ್ಕೆಯಲ್ಲಿ ಹಿಡಿದು ಎಳೆದಾಡಿದ್ದು ಆ ಮೂಲಕ ಭಾ.ದಂ.ಸಂ. 323 ಸಂಗಡ 34 ರಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಚಾಸಾ 1 ನೇದ್ದವರನ್ನು ಎಳೆದಾಡುತ್ತಿರುವಾಗ, ಚಾಸಾ ನಂ 4 ರವರು ಜಗಳ ಬಿಡಿಸಲು ಬಂದಾಗ ಆರೋಪಿ 4 ನೇದ್ದವರು

ಹಿಡಿದುಕೊಂಡಾಗಿ ಆರೋಪಿ 3 ನೇದ್ದವನು ಬಡಿಗೆಯಿಂದ ಚಾಸಾ 4 ನೇದ್ದವರ ಮೊಳಕಾಲಿಗೆ ಹೊಡೆದು ಗುಪ್ತ ಪೆಟ್ಟು ಪಡಿಸಿದ್ದು ಆ ಮೂಲಕ ಭಾ.ದಂ.ಸಂ. 324 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಆರೋಪಿ ನಂ.1 ನೇದ್ದವಳು ಚಾಸಾ 1 ನೇದ್ದವಳಿಗೆ ಈ ರಂಡಿ ಮುದುಕಿಯಾದರು ಇವಳ ಧಿಮಾಕು ಹೋಗಿಲ್ಲ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿರುತ್ತಾರೆ ಆ ಮೂಲಕ ಭಾ.ದಂ.ಸಂ. 504 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಚಾಸಾ 1 ಮತ್ತು 4 ನೇದ್ದವರೊಂದಿಗೆ ಜಗಳ ತೆಗೆದು ಜಗಳ ಬಿಟ್ಟು ಹೋಗುವಾಗ ಇವತ್ತು ನೀವು ಉಳಿದಿರಿ ನೀವು ಪಾಲು ಕೊಟ್ಟಿಲ್ಲ ಅಂತಾ ಅಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಬೇದರಿಕೆ ಹಾಕಿ ಹೋಗಿದ್ದು ಆ ಮೂಲಕ ಭಾ.ದಂ.ಸಂ. 506 ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 05-12-2024 ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.1532/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ಶ್ರೀಮತಿ ರೇಖಾ ಗಂಡ ಸಿದ್ದಣ್ಣ ಕರನಕೋಟೆ
ವಃ 22 ವರ್ಷ, ಉಃ ಮನೆ ಕೆಲಸ
ಸಾಃ ಶಿವಾಜಿ ನಗರ ರಿಂಗರೋಡ ಕಲಬುರಗಿ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ.1

ಆ-2

ಆ-3

ಆ-4

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ.1

ಆ-2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 05-12-2024 ಪ್ರ.ದ.ನ್ಯಾದಂ. ಸೇಡಂ.